**ದಿನಾಂಕ: 09.02.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಡಿ.ವಿ.ಎಸ್. ವಕೀಲರಿಂದ:

8 ನೇ ಪ್ರತಿವಾದಿಗೆ ಅಸ್ತಮ ಖಾಯಿಲೆ ಇರುತ್ತದೆ. 8 ನೇ ಪ್ರತಿವಾದಿ ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಅಧಿಕಾರ ಪತ್ರ ಬರೆದುಕೊಟ್ಟ ನಂತರ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೀವು ಯಾವುದಾದರೂ ವ್ಯವಹಾರಗಳನ್ನು ಮಾಡಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನಾವು ಅಲ್ಲಿ ರಂಗನಾಥಸ್ವಾಮಿ ದೇವಸ್ಥಾನ ಕಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ ಸದರಿ ರಂಗನಾಥಸ್ವಾಮಿ ದೇವಸ್ಥಾನ ಇತ್ತು. ದೇವಸ್ಥಾನ ಇರುವ ಬಗ್ಗೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಸಿರುತ್ತೇನೆ.

**2.** ಚಿಕ್ಕರಾಮಯ್ಯ ನನ್ನ ಹೆಂಡತಿಯ ತಂದೆ. ಚಿಕ್ಕರಾಮಯ್ಯನವರ ತಂದೆ ಪಾಪಯ್ಯನವರನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ. 98/1 ಎ ರಲ್ಲಿ ಒಟ್ಟು 5 ಎಕರೆ 16 ಗುಂಟೆ ಜಮೀನು ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದು 5 ಎಕರೆ 26 ಗುಂಟೆ ಒಟ್ಟು ವಿಸ್ತೀರ್ಣ ಇದ್ದು ಅದರಲ್ಲಿ 10 ಗುಂಟೆ ಭೂ ಪರಿವರ್ತನೆಯಾಗಿ ಸರ್ವೆ ನಂ. 98/ಬಿ ಎಂದು ಪೋಡಿಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸರ್ವೆ ನಂ. 98/1 ಎ ರಲ್ಲಿನ ಜಮೀನು ಪಾಪಣ್ಣ ಮತ್ತು ಶಾನುಭೋಗ ಭೈರಪ್ಪನವರಿಗೆ ಸೇರಿದ ಜಮೀನು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಚಿಕ್ಕರಾಮಯ್ಯನವರಿಗೆ ಸೇರಿರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ. 98/1 ಎ ರಲ್ಲಿನ ಸಂಪೂರ್ಣ ಜಮೀನು

ಚಿಕ್ಕರಾಮಯ್ಯನವರಿಗೆ ಮಾತ್ರ ಸೇರಿತ್ತು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

**3.** ಸರ್ವೆ ನಂ. 98/1 ಎ ರಲ್ಲಿನ 5 ಎಕರೆ 16 ಗುಂಟೆಯಲ್ಲಿ 2 ಎಕರೆ 28 ಗುಂಟೆ ಪಾಪಯ್ಯನವರಿಗೆ ಸೇರಿತ್ತು ಎಂದು ಸೂಚಿಸುವುದು ಸರಿಯಲ್ಲ. ಪಾಪಯ್ಯ 10 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಯಾರು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಚಿಕ್ಕರಾಮಯ್ಯನವರ ಹೆಸರಿನಲ್ಲಿ ಪರಿವರ್ತನೆಯಾಗಿರುವ 10 ಗುಂಟೆ ಜಮೀನು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ. 98/1 ನ್ನು ಸರ್ವೆ ನಂ. 98/1 ಎ ಮತ್ತು ಸರ್ವೆ ನಂ. 98/1 ಬಿ ಎಂದು ಪೋಡಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ. 98/1 ಬಿ ರಲ್ಲಿ 2 ಎಕರೆ 38 ರ ಜಮೀನಿನ ಪಹಣಿ ಶಾನುಭೋಗ ಭೈರಪ್ಪನವರ ಹೆಸರಿನಲ್ಲಿತ್ತು ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98/1 ಎ ಪುನಃ ಸರ್ವೆ ನಂ. 98/1 ಎ 1 ಎಂದು ಹಾಗೂ ಸರ್ವೆ ನಂ. 98/1 ಎ 2 ಎಂದು ಪೋಡಿಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

**4.** ಪಾಪಯ್ಯನ ಮಗಳು ಗಂಗಮ್ಮನವರನ್ನು ನಾನು ನೋಡಿರುವುದಿಲ್ಲ. ಶಿವಯ್ಯನವರನ್ನು ನಾನು ನೋಡಿರುವುದಿಲ್ಲ. ಗಂಗಮ್ಮ ಮತ್ತು ಶಿವಯ್ಯನವರು ದಾವಾ ಸ್ವತ್ತನ್ನು ಸುಮಾರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಗಂಗಮ್ಮ ದಾವಾ ಸ್ವತ್ತಿನಲ್ಲಿ 30 ಗುಂಟೆ ಜಮೀನನ್ನು ಶಿವಕುಮಾರ್‌ರವರಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿ ಮುಂದುವರೆದು ಆ ರೀತಿ ಮಾಡಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**5.** ನನ್ನ ಮತ್ತು 8 ನೇ ಪ್ರತಿವಾದಿ ಶಾರದಮ್ಮನವರ ಮದುವೆ ದಿನಾಂಕ 23.06.1976 ರಲ್ಲಿ ಆಗಿರುತ್ತದೆ. ದಿನಾಂಕ 05.08.1980 ರಲ್ಲಿ ಗಂಗಮ್ಮ ದಾವಾ ಸ್ವತ್ತಿನಲ್ಲಿ 30 ಗುಂಟೆ ಜಮೀನನ್ನು ಶಿವಕುಮಾರ್‌ರವರಿಗೆ ಸರ್ವೆ ನಂ. 98/1 ರಲ್ಲಿ ದಾನ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98/1 ರಲ್ಲಿ ಪೋಡಿಯಾಗಿ ಸರ್ವೆ ನಂ. 98/1 ಎ2 ಎಂದು ಪೋಡಿಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಶಿವಕುಮಾರ್‌ರವರು ಬಾಲ್ಯದಲ್ಲಿಯೇ ತೀರಿಕೊಂಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ನಮ್ಮ ಊರಿನಲ್ಲಿ ಇಲ್ಲ ಆದರೆ ತೀರಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

**6.** ಶಾನುಭೋಗ ಭೈರಪ್ಪನವರನ್ನು ನಾನು ನೋಡಿರುವುದಿಲ್ಲ. ಶಾನುಭೋಗ ಭೈರಪ್ಪನವರ ಮಗ ಕೃಷ್ಣಮೂರ್ತಿನವರು ದಾವಾ ಸ್ವತ್ತಿನಲ್ಲಿ 3 ಗುಂಟೆ ಜಮೀನನ್ನು ನಾಗಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾಗಣ್ಣರವರಿಗೆ ಜಮೀನು ಮಾರಾಟ ಮಾಡಿದಾಗ ತಪ್ಪಾಗಿ ಪೋಡಿಯಾಗಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಉದ್ದೇಶಪೂರ್ವಕವಾಗಿ ಮಾಡಿರುತ್ತಾರೆ ನನ್ನ ಮಾವ ಅಮಾಯಕ ವ್ಯಕ್ತಿ ಎಂದು ಉತ್ತರಿಸಿರುತ್ತಾರೆ. ನಾಗಣ್ಣನ ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ 3 ಗುಂಟೆ ಜಮೀನು ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಮಾರಾಟ ಮಾಡಿರಬಹುದು ಆದರೆ ಅವರಿಗೆ ಜಮೀನು ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

**7.** ನಾಗಣ್ಣನವರು 25 ಗುಂಟೆ ಜಮೀನನ್ನು ತಿಮ್ಮಪ್ಪ ತಂದೆ ಗಂಗಪ್ಪನವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಾಗಣ್ಣನವರು ಸರ್ವೆ ನಂ. 97/4 ರಲ್ಲಿ

ಜಮೀನನ್ನು ಖರೀದಿ ಮಾಡಿ ಮಾರಾಟ ಮಾಡುವಾಗ ಉದ್ದೇಶಪೂರ್ವಕವಾಗಿ ಸರ್ವೆ ನಂ. 98 ಎಂದು ತಪ್ಪಾಗಿ ನಮೂದು ಮಾಡಿಸಿ ಮಾರಾಟ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಚಾರ ತಿಮ್ಮಪ್ಪ ನ್ಯಾಯಾಲಯದಲ್ಲಿ ಹೇಳಿದ ನಂತರ ನಮಗೆ ಗೊತ್ತಾಗಿರುತ್ತದೆ. ತಿಮ್ಮಪ್ಪ ಸರ್ವೆ ನಂ. 97/4 ರಲ್ಲಿ ಸ್ವಾಧೀನದಲ್ಲಿರುತ್ತಾರೆ ಆದರೆ ಕ್ರಯ ಪತ್ರದಲ್ಲಿ ಉದ್ದೇಶಪೂರ್ವಕವಾಗಿ ಸರ್ವೆ ನಂ 98/1 ಎಂದು ನಮೂದು ಮಾಡಿಸಿಕೊಂಡಿರುತ್ತಾರೆ. 4 ನೇ ಪ್ರತಿವಾದಿ ನಾಗಣ್ಣನವರಿಂದ ಖರೀದಿ ಮಾಡಿರುವ ಜಮೀನು ಸರ್ವೆ ನಂ. 97/4 ರಲ್ಲಿರುತ್ತದೆ ಆದ್ದರಿಂದ ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ.

**8.** ಗುಂಡಯ್ಯ ಶೆಟ್ಟಿರವರು ಸರ್ವೆ ನಂ. 98/1 ರಲ್ಲಿ ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ. ಸರ್ವೆ ನಂ. 98/1 ಎ 2 ರಲ್ಲಿ ನಿಮಗೆ ಹಕ್ಕು ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅದು ನಮ್ಮ ಜಮೀನು ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ. 98/4 ರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ. ಸರ್ವೆ ನಂ. 98/1 ಎ 1 ರಲ್ಲಿ ನಿಮಗೆ ಹಕ್ಕು ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಅದು ನಮ್ಮ ಜಮೀನು ಎಂದು ಉತ್ತರಿಸಿರುತ್ತಾರೆ. ಸರ್ವೆ ನಂ. 98/1 ರಲ್ಲಿ 10 ಗುಂಟೆ ಜಮೀನು ಭೂ ಪರಿವರ್ತನೆಯಾದ ದಿನಾಂಕ ನನಗೆ ಗೊತ್ತಿರುವುದಿಲ್ಲ.

**9.** ದಿನಾಂಕ 14.12.1989 ರಂದು ಚಿಕ್ಕರಾಮಯ್ಯ ಅವರು ಮೂರು ಜನ ಮಕ್ಕಳಿಗೆ ಮರಣ ಶಾಸನ ಬರೆದಿರುತ್ತಾರೆ. ಸದರಿ ಮರಣ ಶಾಸನವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಮರಣಶಾಸನದಂತೆ ಸರ್ವೆ ನಂ. 98/1 ರಲ್ಲಿ 8 ನೇ

ಪ್ರತಿವಾದಿಗೆ ಮಾತ್ರ 15 ಗುಂಟೆ ಜಮೀನನ್ನು ನೀಡಿರುತ್ತಾರೆ ಉಳಿದ ಜಮೀನು ಹಾಗೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಮರಣಶಾಸನ ಬರೆಯುವ ಕಾಲಕ್ಕೆ ಸರ್ವೆ ನಂ. 98/1 ರಲ್ಲಿ ಚಿಕ್ಕರಾಮಯ್ಯನಿಗೆ ಮಾಲಿಕತ್ವ ಇತ್ತು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸರ್ವೆ ನಂ. 98/1 ರಲ್ಲಿ 15 ಗುಂಟೆ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನು ಯಾರ ಹೆಸರಿನಲ್ಲಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನ್ನ ಮಾವನ ಹೆಸರಿನಲ್ಲಿತ್ತು ನನ್ನ ಮಾವ ಅಮಾಯಕರಾದ ಕಾರಣ ಎಲ್ಲಾ ಬೋಗಸ್ ಪಹಣಿಗಳನ್ನು ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

**10.** ನನ್ನ ಮಾವ ನನ್ನ ಹೆಂಡತಿಗೆ ಬರೆದುಕೊಟ್ಟ ಮರಣಶಾಸನದ ಆಧಾರದ ಮೇರೆಗೆ ಖಾತೆ ವರ್ಗಾವಣೆಯಾಗಿರುತ್ತದೆ, ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನನ್ನ ಹೆಂಡತಿಯ ಹೆಸರಿಗೆ ಮರಣಶಾಸನ ಬರೆದಿರುವ 15 ಗುಂಟೆ ಜಮೀನಿನ ಪೂರ್ವಕ್ಕೆ- ಸರ್ವೆ ನಂ. 98/1 ರಲ್ಲಿನ ಉಳಿಕೆ ಜಮೀನು, ಪಶ್ಚಿಮಕ್ಕೆ-ಸರ್ಕಾರಿ ರಸ್ತೆ, ಉತ್ತರಕ್ಕೆ- ಸರ್ವೆ ನಂ. 98/1 ರಲ್ಲಿನ ಉಳಿಕೆ ಜಮೀನು, ದಕ್ಷಿಣಕೆ-ಸರ್ವೆ ನಂ. 98/1 ರಲ್ಲಿನ ಉಳಿಕೆ ಜಮೀನು. ಸದರಿ 15 ಗುಂಟೆಯ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಜಮೀನಿಗೆ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸದರಿ ಜಮೀನುಗಳು ಖಾತೆ ನಿಮ್ಮ ಮಾವನ ಹೆಸರಿನಲ್ಲಿ ಇರುತ್ತದೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಪ್ರತಿವಾದಿಗಳು ಏನೋ ಮಾಡಿರುತ್ತಾರೆ ಆದರೆ ದಾಖಲೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ.

**11.** ದಿನಾಂಕ 14.12.1989 ರಂದು ಚಿಕ್ಕರಾಮಯ್ಯ ಸರ್ವೆನಂ. 98/1 ಕ್ಕೆ ಸಂಬಂಧಿಸಿದಂತೆ 8 ನೇ ಪ್ರತಿವಾದಿಯ ಹೆಸರಿಗೆ ಯಾವುದೇ ಮರಣ ಶಾಸನ ಬರೆದುಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂ. 98/1 ರಲ್ಲಿನ ಜಮೀನಿಗೆ ಮರಣಶಾಸನ ಬರೆಯಲು ಚಿಕ್ಕರಾಮಯ್ಯನಿಗೆ ಯಾವುದೇ ಹಕ್ಕು ಇರಲಿಲ್ಲ ಮತ್ತು ಮರಣಶಾಸನ ಬರೆದುಕೊಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಕಂದಾಯ ದಾಖಲೆಗಳಿಗೆ ತಪ್ಪಾಗಿ ಪೋಡಿಯಾಗಿರುವುದನ್ನು ದುರುಪಯೋಗ ಪಡಿಸಿಕೊಂಡು ಸರ್ವೆ ನಂ. 98/2 ರಲ್ಲಿನ ಆಸ್ತಿ ಚಿಕ್ಕರಾಮಯ್ಯನವರಿಗೆ ಸೇರಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**12.** 1 ರಿಂದ 3 ನೇ ವಾದಿಗಳು ದಾವಾ ಸ್ವತ್ತಿನಲ್ಲಿನ 30 ಗುಂಟೆ ಜಮೀನಿನ ಮಾಲೀಕರು ಮತ್ತು ಸ್ವಾಧೀನದಾರರ ಎಂದು ಸೂಚಿಸುವುದು ಸರಿಯಲ್ಲ. ಸರ್ ನಂ. 98/1 ರಲ್ಲಿನ 15 ಗುಂಟೆ ಜಮೀನಿನಲ್ಲಿ ದೇವಸ್ಥಾನ ಕಟ್ಟಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ , ಅದರೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ.
ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

Sd/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ